ದಿನಾಂಕ 24–5–2016 ರಂದು ಮದ್ಯಾಹ್ನ 2.00 ಗಂಟೆಗೆ ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಳನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್ | ಸದಸ್ಯರು |
| 3. | ಶ್ರೀ ಪ್ರಿಯಾಂಕ ಎಂ. ಖರ್ಗೆ | ಸದಸ್ಯರು |
| 4. | ಡಾ. ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 5. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 6. | ಡಾ. ಎ. ನಾಗನಗೌಡ | ಸದಸ್ಯರು |
| 7. | ಶ್ರೀ ಕೆ. ಮುರಳೀಧರ | ಸದಸ್ಯರು |
| 8. | ಡಾ. ಡಿ.ಎಂ. ಚಂದರಗಿ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೇಳನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| 1 | **ದಿನಾಂಕ 29–3–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತಾರನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 29–3–2016 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತಾರನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು **(ಕ್ರಮ: ಕುಲಸಚಿವರು)** |
| 2 | **ದಿನಾಂಕ 29–3–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತಾರನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 29–3–2016 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತಾರನೇಯ ಸಭೆಯ ನಡುವಳಿಕೆಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಅನುಕ್ರಮ ಸಂ. 4.6 ಮತ್ತು 5.1 ಗೆ ಸಂಬಂಧಿಸಿದಂತೆ ತಾಂತ್ರಿಕ ಮಂಜೂರಾತಿಯನ್ನು ಕೆ.ಪಿ.ಡಬ್ಲ್ಯೂ.ಡಿ. ಇಲಾಖೆಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರಿಂದ ಪಡೆಯುವಲ್ಲಿ ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಏಕಕಾಲದಲ್ಲಿಯೇ ಕೈಗೊಳ್ಳುವಲ್ಲಿ ವಿಳಂಬವಾಗುತ್ತಿರುವುದರ ಕುರಿತು ಚರ್ಚಿಸುತ್ತಾ, ಸಿವಿಲ್ ಪರಿಣಿತರನ್ನು ಹಾಗೂ ಕೆ.ಪಿ.ಡಬ್ಲ್ಯೂ.ಡಿ. ಇಲಾಖೆಯ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲು ಸಲಹೆ ನೀಡಿದರು.<br>**(ಕ್ರಮ: ಕುಲಸಚಿವರು/ ಕಾರ್ಯನಿರ್ವಾಹಕ ಅಭಿಯಂತರರು)** |
| 3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ದಿನಾಂಕ 28–5–2016 ರಂದು ಜರುಗುವ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಆರನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು, ಆರನೇಯ |

| | |
|---|---|
| | ಘಟಿಕೋತ್ಸವವನ್ನು ಮುಂದೂಡಿದ್ದರಿಂದ ಪದವಿಗಳನ್ನು ಪಡೆಯಲು ಈ ಹಿಂದೆ ಆಯ್ಕೆ ಸೂಚಿಸಿ ಅರ್ಜಿ ಸಲ್ಲಿಸಿದಂತಹ ವಿದ್ಯಾರ್ಥಿಗಳಿಗೆ **"ಉಪಸ್ಥಿತಿ / ಅನುಪಸ್ಥಿತಿ"** ಯಲ್ಲಿ ಪದವಿಗಳನ್ನು ಪಡೆಯುವುದನ್ನು ಬದಲಿಸಲು ಅವಕಾಶ ಕೊಟ್ಟಿದ್ದನ್ನು ಸಹ ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |
| 4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ತೋಟಗಾರಿಕೆ, ಕೃಷಿ ಸೂಕ್ಷ್ಮಜೀವಿ ಶಾಸ್ತ್ರ ಮತ್ತು ಸಸ್ಯಕ್ರೀಯ ಶಾಸ್ತ್ರ ವಿಭಾಗಗಳಲ್ಲಿ ಪಿ.ಹೆಚ್.ಡಿ. ಪದವಿ ಕಾರ್ಯಕ್ರಮಗಳನ್ನು 2016-17 ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ತೋಟಗಾರಿಕೆ, ಕೃಷಿ ಸೂಕ್ಷ್ಮಜೀವಿ ಶಾಸ್ತ್ರ ಮತ್ತು ಸಸ್ಯಕ್ರೀಯ ಶಾಸ್ತ್ರ ವಿಭಾಗಗಳಲ್ಲಿ ಪಿ.ಹೆಚ್.ಡಿ. ಪದವಿ ಕಾರ್ಯಕ್ರಮಗಳನ್ನು 2016-17 ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಪ್ರಸ್ತಾವನೆಗೆ ಘನ ವೇದಿಕೆಯು ಅನುಮೋದನೆ ನೀಡಿತು. ಪರಿಣಿತ ತಜ್ಞರ ಸಮಿತಿಯ ವರದಿಗಳಿಗೆ ಮಾನ್ಯ ಸದಸ್ಯರುಗಳು ಒಪ್ಪಿಗೆ ನೀಡಿದರು ಹಾಗೂ ಇದಕ್ಕಾಗಿ ಹೆಚ್ಚುವರಿ ಹಣಕಾಸಿನ ಅವಶ್ಯಕತೆ ಇರುವುದಿಲ್ಲವಾದ್ದರಿಂದ ಸದರಿ ವಿಷಯಕ್ಕೆ ಒಪ್ಪಿಗೆ ನೀಡಲಾಯಿತು. ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಣಕಾಸಿನ ನೆರವನ್ನು ಪಡೆಯಲು ಹಾಗೂ ವಿಭಾಗಗಳಲ್ಲಿಯ ಸಂಶೋಧನಾ ಸೌಲಭ್ಯಗಳನ್ನು ಉತ್ತಮಪಡಿಸಿಕೊಳ್ಳಲು ಮ್ಯಾಕ್ರೊ, ಹೈ.ಕ.ಪ್ರ.ಅ.ಮಂ. ಯಿಂದ ಅನುದಾನ ಪಡೆಯಲು ಪ್ರೊಫೆಸರ್ ಚೇರ್ ರಚಿಸಲು ಸಲಹೆ ನೀಡಲಾಯಿತು.<br>(ಕ್ರಮ: ಕುಲಸಚಿವರು / ಡೀನ್(ಸ್ನಾತಕೋತ್ತರ)) |
| 5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2015-2016 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2016-2017 ನೇ ಸಾಲಿನ ಆಯವ್ಯಯ ಅಂದಾಜು ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ವಿವಿಧ ಮೂಲಗಳಿಂದ ಸ್ವೀಕೃತವಾದ ಅನುದಾನದ ವಿವರಗಳನ್ನು ವಾರ್ಷಿಕ ಅನುದಾನದಲ್ಲಿ ನಮೂದಿಸಲು ಶ್ರೀ ಎಂ. ಮಹೇಶ್ವರ ರಾವ್, ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರ ಸಲಹೆಯೊಂದಿಗೆ ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು (ಕ್ರಮ : ಕುಲಸಚಿವರು) |
| 6 | **ಕೃವಿವಿ ರಾಯಚೂರಿನ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯಕ್ಕೆ ಸಲಹೆಗಾರರೆಂದು ಡಾ. ಎ.ಯು. ಏಕಬೋಟೆ, ನಿರ್ದೇಶಕರು (ನಿವೃತ್ತ), ಪೀಡೆನಾಶಕಗಳ ನಿರ್ವಹಣೆ ವಿಭಾಗ, ಎನ್ಐಪಿಎಚ್ಎಂ, ಹೈದ್ರಾಬಾದ್ ಅವರ ಸೇವೆಯನ್ನು ಪಡೆಯುವ ಕುರಿತು**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡುತ್ತಾ ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣ ವಿಶ್ಲೇಷಣೆ ಪ್ರಯೋಗಾಲಯದ ಸಂಶೋಧನಾ ಮತ್ತು ಸೇವಾ ಚಟುವಟಿಕೆಗಳನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರನ್ನು ಸ್ವತಂತ್ರ ಹಾಗೂ ಸಮರ್ಥ ರೀತಿಯಲ್ಲಿ ಕೈಗೊಳ್ಳಲು ತಯಾರು ಮಾಡುವ ಷರತ್ತಿನೊಂದಿಗೆ ಆರು ತಿಂಗಳುಗಳ ಅವಧಿಗೆ ಮಾತ್ರ ಕನ್ಸಲ್ಟೆನ್ಸಿ ಸೇವೆ ಪಡೆದುಕೊಳ್ಳಲು ಸಲಹೆ ನೀಡಲಾಯಿತು. ಆರು ತಿಂಗಳುಗಳ ಅವಧಿಯ ಕನ್ಸಲ್ಟೆನ್ಸಿ ಸೇವೆಗೆ ರೂ. 5.00 ಲಕ್ಷಗಳಿಗಾಗಿ ಟೆಂಡರ್ ಪದ್ಧತಿಯನ್ನು ಅನುಸರಿಸಲು ಸಲಹೆ ನೀಡಲಾಯಿತು.<br>(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು) |

| | |
|---|---|
| 7 | ಕೃವಿವಿ ರಾಯಚೂರಿನ ವಿವಿಧ ಆವರಣಗಳಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಗುಣವತ್ತತೆಯ ಪರಿಶೀಲನೆಯನ್ನು ಪರಿಣಿತ ಸಿವಿಲ್ ಇಂಜಿನಿಯರ್ ರವರಿಂದ ಕೈಗೊಳ್ಳುವುದಕ್ಕಾಗಿ ಗೌರವಧನ ನೀಡಲು ಅನುಮೋದನೆ ಕುರಿತು.<br><br>ಠರಾವು:<br>ವಿವರವಾದ ಚರ್ಚೆಯ ನಂತರ, ಕೃವಿವಿ ರಾಯಚೂರಿನ ವಿವಿಧ ಆವರಣಗಳಲ್ಲಿ 2009–2014 ರ ಅವಧಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಭೌತಿಕ ಹಾಗೂ ಗುಣವತ್ತತೆಯ ಪರಿಶೀಲನೆಯನ್ನು ಮಾಡಲು ಪರಿಣಿತ ಸಿವಿಲ್ ಇಂಜಿನಿಯರ್ ಅವರ ಸೇವೆಯನ್ನು ಪಡೆದುದಕ್ಕಾಗಿ ನೀಡಬೇಕಾದ ಗೌರವ ಧನಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು/ ಕಾರ್ಯನಿರ್ವಾಹಕ ಅಭಿಯಂತರರು) |
| 8 | ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.<br>ಠರಾವು:<br>ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಿದನ್ನು ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಕಾರ್ಯನಿರ್ವಾಹಕ ಅಭಿಯಂತರರು) |
| | **ADDITIONAL ITEMS** |
| 1 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸುವ ಕುರಿತು<br>ಠರಾವು:<br>ವಿವರವಾದ ಚರ್ಚೆಯ ನಂತರ, ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಗ್ರೇಡಿಗಿಂತ ಕೆಳಗಿನ ದರ್ಜೆಯವರಲ್ಲದವರ ಇಬ್ಬರು ನಿವೃತ್ತ ಇಂಜಿನಿಯರ್‌ರವರ ಬದಲಿಗೆ ಒಬ್ಬ ಇಂಜಿನಿಯರ್ ಇರುವಂತೆ ಸಲಹೆ ನೀಡುತ್ತಾ, ಐವತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಸಿವಿಲ್ ಕಾಮಗಾರಿಗಳಿಗಾಗಿ ತಾಂತ್ರಿಕ ಪರಿಶೀಲನಾ ಸಮಿತಿಯನ್ನು ರಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಸದರಿ ವಿಷಯಕ್ಕೆ ಸಂಬಧಿಸಿದಂತೆ ಪದ್ಧತಿಯನ್ನು ಪಾಲಿಸುವಲ್ಲಿ ಆಗುತ್ತಿರುವ ವಿಳಂಬವನ್ನು ತಡೆಯುವ ಸಲುವಾಗಿ ಕ್ರಮ ಕೈಗೊಳ್ಳಲು ಉದ್ದೇಶಿತ ಸಮಿತಿಯನ್ನು ರಚಿಸಲು ಘನ ವೇದಿಕೆಯು ಅನುಮೋದನೆ ನೀಡಿತು ಹಾಗೂ ಸದರಿ ಸಮಿತಿಯ ಸಭೆಗೆ ಶೇಕಡ 50 ರಷ್ಟು ಸದಸ್ಯರ ಕೋರಂ ಇರುವಂತೆ ಹಾಗೂ ಒಬ್ಬ ನಿವೃತ್ತ ಇಂಜಿನಿಯರ್ ಕಡ್ಡಾಯವಾಗಿ ಹಾಜರು ಇರುವಂತೆ ಘನ ವೇದಿಕೆಯು ಸಲಹೆ ನೀಡಿತು.<br>(ಕ್ರಮ: ಕುಲಸಚಿವರು/ ಹಣಕಾಸು ನಿಯಂತ್ರಣಾಧಿಕಾರಿಗಳು/ ಕಾರ್ಯನಿರ್ವಾಹಕ ಅಭಿಯಂತರರು) |
| 2 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಡಾ. ಸಾದತ್ ಅಲಿ ಖಾನ್ ಹಾಗೂ ಶ್ರೀ ಪ್ರವೀಣ್ ವಿ. ನಾಯಕ್ ಅವರುಗಳು ಕೈಗೊಂಡ ಶೈಕ್ಷಣಿಕ ಪ್ರವಾಸದ ಕುರಿತು.<br><br>ಠರಾವು:<br>ಮಾನ್ಯ ಸದಸ್ಯರುಗಳು ಈಶಾನ್ಯ ಭಾರತದ ವಿವಿಧ ಪ್ರದೇಶಗಳಲ್ಲಿರುವ ಕೃಷಿ ಹಾಗು ಕೃಷಿಗೆ ಸಂಬಂಧಪಟ್ಟ ಪ್ರಮುಖ ಸಂಸ್ಥೆಗಳಾದ ಬಿಧನ್ ಚಂದ್ರ ಕೃಷಿ ವಿಶ್ವವಿದ್ಯಾಲಯ, ಕೋಲ್ಕತ್ತಾ, ಶಿಲ್ಲಾಂಗ್, ಗೌಹಾಟಿ, ಡಾರ್ಜಿಲಿಂಗ್‌ನಲ್ಲಿರುವ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಹಾಗೂ ಫ್ಲೋರಿಕಲ್ಚರ್ ಸೆಂಟರ್ (ಆರ್ಕಿಡ್ಸ್) ಮತ್ತು ನ್ಯಾಶ್ನಲ್ ಸೆಂಟರ್ ಫಾರ್ ಆರ್ಕಿಡ್ಸ್, ಸಿಕ್ಕಿಂ ಹಾಗೂ ಕೃಷಿ ತಾಂತ್ರಿಕ ಮತ್ತು ಕೊಯ್ಲೋತ್ತರ |

| | |
|---|---|
| | ತಂತ್ರಜ್ಞಾನ ಮಹಾವಿದ್ಯಾಲಯ, ರಾನಿಪೋಲ್, ಗ್ಯಾಂಗ್‌ಟಾಕ್‌ಗೆ ದಿನಾಂಕ 13-4-2016 ರಿಂದ 23-4-2016 ರವರೆಗೆ ಭೇಟಿ ನೀಡಿದ ಪ್ರವಾಸದ ಅನುಭವ ಕುರಿತು ವಿವರವಾದ ಚರ್ಚೆಯ ನಂತರ ಘನ ವೇದಿಕೆಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು. ಸದರಿ ಪ್ರವಾಸಕ್ಕೆ ತಗುಲಿದ ವೆಚ್ಚ ರೂ. 3,05,000/- ಗಳಿಗೆ ಸಹ ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /- 27-5-2016 | ಸಹಿ /- 27-5-2016 |
| **(ಪಿ.ಎಂ. ಸಾಲಿಮಠ)** | **(ಡಿ.ಎಂ. ಚಂದರಗಿ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.